## ಪ್ರಬಂಧ

ಇನ್ನೊಂಥರದ ಪೀಕಲಾಟ. ‘ಆಹಾರ ಸನ್ಯಾಸ’ ಸ್ವೀಕರಿಸುವ ಅವರು ತಿನ್ನಲೋ, ಬೇಡವೋ ಅನ್ನುವಂತೆ ತಿನ್ನುತ್ತಿರುತ್ತಾರೆ. ಬಡಿಸುವವರಿಗೆ ಆತುರ. ಆ ವೇಗಕ್ಕೂ ಈ ವೇಗಕ್ಕೂ ತಾಳಮೇಳವಿಲ್ಲ. ಬಡಿಸಬೇಕೆಂದು ಬಂದವರು ಇವನ ತಟ್ಟೆಯನ್ನು ನೋಡಿ ಹಾಗೇ ಸಾಗಿಹೋಗುತ್ತಾರೆ. ಥರಾವರಿಯ ಐಟಮ್ಮುಗಳು ಮಿಸ್ ಆದರೂ ಪಕ್ಕದವನಿಗೆ ಪರಿವೆಯಿಲ್ಲ. ನಿಮ್ಮ ಹೊಟ್ಟೆಯಿಲ್ಲಿ ಧಗಧಗ ಉರಿಯುತ್ತಿರುತ್ತದೆ.

ಕೆಲವು ಧಣಿಗಳಿಗೆ ಏನೋ ಬಿಗುಮಾನ. ಬಡಿಸಬಂದರೆ ಸಾಕು, ಕೈ ಅಡ್ಡ ತೋರಿಸೋದು. ‘ಹ್ಞೂ... ಸಾಕು. ಸಾಕು... ಎಷ್ಟು ಹಾಕ್ತೀರಪ್ಪಾ...?’ ಎನ್ನುವ ಉವಾಚಗಳು ಬೇರೆ. ಹೆಚ್ಚು ತಿಂದರೆ ಆಹ್ವಾನಿಸಿದವರು ಏನು ತಿಳಿದುಕೊಳ್ಳುತ್ತಾರೋ ಎನ್ನುವ ಮುಜುಗರ. ಅಷ್ಟು ಸಂಕೋಚವಿದ್ದವನು ಊಟಕ್ಕೇಕೆ ಕೂರಬೇಕು? ವೇದಿಕೆ ಮೇಲಿಂದಲೇ ಫೋಟೋಗೆ ಮುಖ ತೋರಿಸಿ ಬಂದ ದಾರಿಯಲ್ಲೇ ತೆರಳಬಹುದಿತ್ತಲ್ಲವೇ ಅನ್ನಿಸುತ್ತದೆ. ತಾನೂ ಅರೆಹೊಟ್ಟೆ ತಿಂದು ಪಕ್ಕ ಕುಳಿತವನಿಗೂ ಅರೆಕಾಸು ಮಜ್ಜಿಗೆ ಕುಡಿಸುವ ಜನ ಇವರು.

ಸ್ವಲ್ಪ ಜನಕ್ಕೆ ಒಣಜಂಭ. ತಾನು ಭಾರಿ ಡಯಟ್ಟಿನಲ್ಲಿದ್ದೇನೆಂದು ಎಲ್ಲರ ಮುಂದೆ ಹೇಳಿಕೊಂಡು ಬಿಡುತ್ತಾರೆ. ಹಾಗಾಗಿ ಇಂಥ ಸಮಾರಂಭಗಳಲ್ಲಿ ತಿನ್ನಬೇಕೆಂಬ ಆಸೆಯಾದರೂ ಅದುಮಿಕೊಳ್ಳಬೇಕಾಗುತ್ತದೆ. ತಮ್ಮ ಹೊಟ್ಟೆಗೆ ತಾವೇ ಮೋಸ ಮಾಡಿಕೊಳ್ಳುವಂಥವರು ಇವರು. ಬೇಡ, ಬೇಡ ಅಂತ ನಖರಾ ಮಾಡುತ್ತಲೇ ಪಕ್ಕ ಕುಳಿತವರ ತಟ್ಟೆಯನ್ನು ಆಸೆಗಣ್ಣುಗಳಿಂದ ನೋಡುತ್ತಿರುತ್ತಾರೆ. ಇವರ ಪಕ್ಕ ಕುಳಿತು ಉಂಡವರಿಗೆ ಹೊಟ್ಟೆನೋವು ಬರೋದಂತೂ ಖಾತ್ರಿ.

ಇನ್ನು ಮಕ್ಕಳು– ಮರಿಗಳನ್ನು ಕಟ್ಟಿಕೊಂಡು ಸಮಾರಂಭಗಳಿಗೆ ಬರುತ್ತಾರಲ್ಲ...? ಅವರನ್ನು ಕಂಡರಂತೂ ಅಯ್ಯೋ ಅನ್ನಿಸುತ್ತದೆ. ಮಕ್ಕಳು ತಿನ್ನಲಾರರು, ಇವರು ಬಿಡಲಾರರು. ಇವರ ಬಲವಂತಕ್ಕೆ ಮಕ್ಕಳು ರಚ್ಚೆ ಹಿಡಿದು ರೋದಿಸುತ್ತಿದ್ದರೂ ಊಹೂಂ, ಕಂಕುಳಲ್ಲಿ ಇರುಕಿಕೊಂಡೇ ತಾವೂ ಉಣ್ಣುತ್ತಲೇ ತುತ್ತನ್ನು ಮಿದಿದು ಮಕ್ಕಳ ಗಂಟಲಿಗೂ ಗಿಡುಗುತ್ತಿರುತ್ತಾರೆ. ಈ ಸಂಕಷ್ಟಗಳನ್ನು ಕಂಡು ಎದುರು ಕುಳಿತವನಿಗೆ ಊಟ ಹೇಗೆ ತಾನೇ ನೆಮ್ಮದಿಯಾಗಿ ಗಂಟಲಲ್ಲಿಳಿದೀತು?

ಗುಂಪನ್ನು ಕಟ್ಟಿಕೊಂಡು ಹೋಗುವವರದೇ ಒಂದು ವರ್ಗವಿದೆ. ವೇದಿಕೆ ಮೇಲೂ ಅಷ್ಟೆ. ಊಟಕ್ಕೂ ಅಷ್ಟೆ, ಒಟ್ಟಿಗೇ ಹೋಗುತ್ತಾರೆ. ಒಟ್ಟಿಗೇ ಕೂಡುತ್ತಾರೆ. ಪಂಕ್ತಿಲಿ ಒಂದು ಸಾಲು ಅವರದೇ ಇರುತ್ತದೆ. ಬಹುಸಂಖ್ಯಾತರಿರುವ ಕಾರಣ ಯಾರಿಗೂ ಯಾವುದಕ್ಕೂ ಕೊರತೆಯಾಗುವುದಿಲ್ಲ. ಗುಂಪಿನಲ್ಲಿರುವುದರಿಂದ ಬಡಿಸುವವರೂ ಅವರತ್ತಲೇ ಹೆಚ್ಚು ಗಮನ ಹರಿಸುತ್ತಾರೆ. ಬಂದವರು ಕೂಡ ಯಾವ ಮುಲಾಜು ಮಾಡದೆ ಅವರವರೇ ಅನುಸರಿಸಿಕೊಂಡು ತಂತಮ್ಮ ಯೋಗಕ್ಷೇಮ ತಾವೇ ನೋಡಿಕೊಳ್ಳಬಲ್ಲವರಾದ ಕಾರಣ ಗೊಂದಲಗಳಿಗೆ ಆಸ್ಪದವಿಲ್ಲ.

ಸಮಾರಂಭಗಳಿಗೆ ಬರುವವರ ಬಗ್ಗೆಯೇ ಹೇಳಿದ್ದಾಯಿತು. ಆಯೋಜಕರ ಕುರಿತೂ ವಿಚಾರಗಳಿವೆ. ಎಷ್ಟಾದರೂ ತಮ್ಮ ಸಮಾರಂಭವಲ್ಲವೇ? ಊಟ– ತಿಂಡಿಗಳಲ್ಲಿ ಯಾವುದೇ ಕೊರತೆಯಾಗಬಾರದು, ಬಂದೋರು ಹೊಗಳುತ್ತಾ ಹೋಗಬೇಕು ಎಂದು ನಿರೀಕ್ಷಿಸುತ್ತಾರೆ. ಇಂಥದೇ ಕೇಟರರ್‌ಗಳು ಬೇಕು ಎಂದು ತಿಂಗಳ ಮುಂಚೆಯೇ ಮನೆಯವರೆಲ್ಲ ಹುಡುಕಿ ಗೊತ್ತು ಮಾಡಿರುತ್ತಾರೆ. ಊಟೋಪಚಾರಗಳ ವಿಷಯದಲ್ಲಿ ಯಾರೂ ಹಿಂದೆಮುಂದೆ ನೋಡರು. ಆದಷ್ಟೂ ಧಾರಾಳವಾಗಿಯೇ ಹಣವನ್ನು ಚೆಲ್ಲಿರುತ್ತಾರೆ. ಅಷ್ಟು ಖರ್ಚು ಮಾಡಿ ಹಾಕಿಸಿದ ಊಟ ಹೇಗಿತ್ತು, ತಿಂದೋರು ಏನಂತಾರೆ ಅಂತ ತಿಳಿದುಕೊಳ್ಳಲು ಆಯೋಜಕ ಸಹಜವಾಗಿಯೇ ಕುತೂಹಲಿಯಾಗಿರುತ್ತಾನೆ. ಆದರೆ ಭೋಜನ ಸವಿಯುವವರೆಗೆ ಸಾವಧಾನವಾಗಿರುತ್ತಿದ್ದ ಬಂಧುಗಳು ಹೊಟ್ಟೆ ತುಂಬುತ್ತಿದ್ದಂತೆ ಗಡಿಬಿಡಿ ಮಾಡುತ್ತಾರೆ. ಬಸ್ಸಿಗೆ ಹೊತ್ತಾಯಿತು, ಟ್ರೇನಿಗೆ ಟೈಮಾಯಿತು ಎನ್ನುತ್ತಾ ಲಗುಬಗೆಯಿಂದ ಹೊರಟೇಬಿಡುತ್ತಾರೆ. ಎಷ್ಟೋ

